a) According to the existing languages policy, a student has to offer and study 3 languages upto 7th standard. Attendence and examinations is compulsory for 3rd language. But passing is not compulsory. Even in SSLC, a student has to offer and study 3 languages out of which he has to pass in 2 languages, out of which one should be Kannada. Therefore, in 7th standard and SSLC, pass in Hindi is not compulsory.

b) — No —

c) Reply given at (a) is applicable.

d) — No —

ವಿಷಯ:- ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 102(426)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಸಮಸ್ಯೆಗಳ ಬಗ್ಗೆ ಪರಿಶೀಲಿಸಲು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಜೆ.ಪಿ.ಶರ್ಮಾ ಅವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯ ವರದಿಯಾವ ಹಂತದಲ್ಲಿದೆ.

ಆ) ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಡಿ.ಮಂಜುನಾಥ (ಉನ್ನತ ಶಿಕ್ಷಣ ಸಚಿವರು):-

ಅ) ಸಮಿತಿಯ ವರದಿ ಪ್ರಗತಿಯಲ್ಲಿದೆ.

ಆ) ಸಮಿತಿಯ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ವಿಷಯ:- ಸುಳ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 103 (658)

ಶ್ರೀ ಎಸ್.ಅಂಗಾರ (ಸೂಳ್ಯ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಅವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಆರು --

ಆ) ಸುಳ್ಯ ತಾಲ್ಲೂಕು ಪಂಜ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಆಕುಕ 63 ಹೆಚ್ ಎಸ್ ಹೆಚ್ 95, ದಿನಾಂಕ 102 1995 ರಲ್ಲಿ ಒಬ್ಬ ಗುತ್ತಿಗೆ ವೈದ್ಯರನ್ನು ನೇಮಕಾತಿ ಮಾಡಿ ಭರ್ತಿ ಮಾಡಲಾಗಿದೆ. ಉಳಿದಿರುವ 5 ಖಾಲಿ ಹುದ್ದೆಗಳನ್ನು ಮುಂದೆ ಸ್ನಾಕೋತ್ತರ ವ್ಯಾಸಂಗ ಮುಗಿಸಿ ಹಿಂದಿರುಗುವ ವೈದ್ಯರಿಂದ ಅಥವಾ ಗುತ್ತಿಗೆ ಆಧಾರದ ಇನ್ನೊಂದು ತಂಡದಿಂದ ನೇಮಕಾತಿ ಮಾಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ವಿಷಯ:- ಆರಣ್ಯ ಇಲಾಖೆಯ ಅನುಮತಿ ಇಲ್ಲದೆ ಭಾರತೀನಗರ ಮತ್ತು ಜಯಮಹಲ್ ಕ್ಷೇತ್ರದಲ್ಲಿ ಮರಗಳನ್ನು ಕಡಿದಿರುವುದು.